# ಶ್ರೀಮಾತೆಯವರ ಪತ್ರಗಳು - ೮

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

### ಪತ್ರ - ೩೩

ಓಂ ರಾಮಕೃಷ್ಣ ಜಯತಿ

ಶರಣಂ ೫.೩.೧೯೦೮

ಪ್ರೀತಿಯ ಮಗೂ,

ನೀನು ಕಳುಹಿಸಿರುವ ಒಂದು ಜೋಡಿ ಸೀರೆಗಳು ಇಂದು ಸಿಕ್ಕಿದವು. ಸೀರೆಗಳು ಅತ್ಯಂತ ಸುಂದರವಾಗಿವೆ. ನಾನು ಅವನ್ನು ಉಪಯೋಗಿಸುವೆನು. ನೀನು ನನ್ನ ಆಶೀರ್ವಾದ ತೆಗೆದುಕೋ. ಹಾಗೂ ಶಾರದಾನಿಗೆ, ಹರಿಪದನಿಗೆ, ಮೋತಿಲಾಲ್‌ಗೆ ಮತ್ತು ಸುಶೀಲನಿಗೆ ನನ್ನ ಆಶೀರ್ವಾದ ಸ್ವೀಕರಿಸಲು ಹೇಳು. ಮತ್ತೆ ಕಾಳೀಪದನು (?) ಶ್ರೀ ಗುರುದೇವರ ಹೆಸರಿನಲ್ಲಿ ಉಪನ್ಯಾಸ ಮಾಡುವನೆಂದು ಕೇಳಿ ನಾನು ತುಂಬಾ ಆನಂದಪಟ್ಟೆ (ಮತ್ತು) ಅವನಿಗೆ ನನ್ನ ಆಶೀರ್ವಾದ ತಿಳಿಸು. ಅಲ್ಲದೆ ನಾನು ಅವನಿಗಾಗಿ ನಮಸ್ಕಾರ ಮಾಡಿರುವೆ. ಉಳಿದ ಬೇರೆ ಬೇರೆ ಭಕ್ತ ಜನರಿಗೆ ನನ್ನ ಆಶೀರ್ವಾದ ತಿಳಿಸು. ನಾನು ಸದ್ಯ ಚೆನ್ನಾಗಿದ್ದೇನೆ. ಮತ್ತು ಮನೆಯವರೆಲ್ಲರೂ ಒಂದು ರೀತಿ ಚೆನ್ನಾಗಿದ್ದಾರೆ. ಮತ್ತೆ ಪ್ರೀತಿಯ ಮಗನೆ, ನೀನು ಸ್ವಾಮಿ ತ್ರಿಗುಣಾತೀತನಿಗೆ ನನ್ನ ಆಶೀರ್ವಾದ ತಿಳಿಸು. ಮತ್ತು ಅವನಿಗೆ ಹೇಳಬೇಕು, ಅವನು ನನಗೆಂದು ಅಲ್ಲಿಂದ ಹಣ ಮನಿಯಾರ್ಡರ್ ಮಾಡಿದ್ದ, ನನಗೆ ಅದು ಇನ್ನೂ ಸಿಕ್ಕಿಲ್ಲ. ಇಂದು ಈ ವರ್ತಮಾನವನ್ನು ನಿನಗೆ ಬರೆದೆ. ಒಂದು ವೇಳೆ ಆ ಸ್ವಾಮೀಜಿ ನಿನ್ನ ಬಳಿ ಇದ್ದರೆ ಇದನ್ನು ತಿಳಿಸು. ಇತಿ–

ನಿಮ್ಮೆಲ್ಲರ ಶುಭಾಕಾಂಕ್ಷಿ ಮಾತೆ.

ಹಾಗೆಯೇ ದೇವಮಾತಾಳಿಗೆ ನನ್ನ ಆಶೀರ್ವಾದ ತಿಳಿಸು. ಇತಿ, ೧೩೧೪ ನೇ ವರ್ಷ, ತಾ. ೨೨ ಫಾಲ್ಗುಣ, ಗುರುವಾರ.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*The Swami Ramakrishnanandaji*
*Sri Ramakrishna Home*
*Brodies' Road*
*Mylapore , Madras*

ವಿವರಣೆ: ದೇವಮಾತಾ ಎಂಬಾಕೆ ಅಮೇರಿಕದ ಭಕ್ತೆ. ಅವಳ ಹಿಂದಿನ ಹೆಸರು ಲೋರಾ ಗ್ಲೆನ್. ದೇವಮಾತಾ ಕೊಲ್ಕತ್ತಾಗೆ ಬಂದು ಶ್ರೀಮಾತೆಯವರ ದರ್ಶನ ಪಡೆದು, ಮಾತೆಯ ಅಹೇತುಕ ಪ್ರೀತಿಯನ್ನು ಪಡೆದು ಆನಂದದಿಂದ ಮುಗ್ಧಳಾಗಿದ್ದಳು.

### ಪತ್ರ - ೩೪

ಓಂ ರಾಮಕೃಷ್ಣ ಜಯತಿ

ಶರಣಂ ೧೯.೩.೧೯೦೮

ಪರಮ ಶುಭಾಶೀರ್ವಾದವನ್ನು ಮೊದಲು ತಿಳಿಸಿ, ವಿಶೇಷವೇನೆಂದರೆ,

ಪ್ರೀತಿಯ ಮಗು, ನಿನ್ನ ಪತ್ರ ಜೊತೆಯಲ್ಲಿ ಮನಿಯಾರ್ಡರ್ ಮೂಲಕ ೨೦ ರೂಪಾಯಿ ಸಿಕ್ಕಿತು. ನಿನಗೆ ನನ್ನ ಆಶೀರ್ವಾದ ಮತ್ತು ದೇವಗುರುಮಾತಾಳಿಗೆ ನನ್ನ ಆಶೀರ್ವಾದ ತಿಳಿಸು. ಅವಳಿಗೆ ಹೇಳು, ಆಕೆ ಶ್ರೀ ಠಾಕೂರರಿಗೆ ಉತ್ತಮ ಹೂವುಗಳಿಂದ ಮಾಲೆಯನ್ನು ಹಾಕಿ ಸಿಂಗರಿಸಿದ್ದಳು, ಇದನ್ನು ಕೇಳಿ ನಾನು ಎಲ್ಲಿಲ್ಲದ ಆನಂದವನ್ನು ಪಡೆದೆ ಎಂದು. ಅನೇಕ ಸದ್ ಬ್ರಾಹ್ಮಣರು ಭೋಜನವನ್ನು ಸ್ವೀಕರಿಸಿದರೆಂದು ತಿಳಿದು, ಇದರಿಂದ ನಾನು ಸಂತುಷ್ಟಳಾದೆ. ಅಳಸಿಂಗನ ಸಹೋದರಿಯ ಪತಿಗೆ ನನ್ನ ಆಶೀರ್ವಾದ ತಿಳಿಸು. ಮತ್ತೆ ಅವನಿಗೆ ಹೇಳಬೇಕು, ಏನೆಂದರೆ ಠಾಕೂರರ ವಚನಾಮೃತ ಗುಣಗಾನಕ್ಕೆ ನಾನು ಸಂತುಷ್ಟಳಾಗಿದ್ದೇನೆ ಎಂದು. ಎಲ್ಲ ಭಕ್ತವೃಂದದವರಿಗೂ ನನ್ನ ಆಶೀರ್ವಾದವನ್ನು ಈಗಲೇ ತಿಳಿಸು. ನಾನು ಸದ್ಯ ಚೆನ್ನಾಗಿದ್ದೇನೆ ಮತ್ತು ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

೧೩೧೪ ವರ್ಷ
ತಾ– ೬ನೇ ಚೈತ್ರ
ದಿನ– ಗುರುವಾರ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*The Swami Ramakrishnanandaji*
*Shri Ramakrishna Home*
*Brodies' Road*
*Mylapore , Madras*

**ವಿವರಣೆ:** ದೇವಮಾತೆಗೆ ಇಲ್ಲಿ 'ದೇವಗುರುಮಾತಾ' ಎಂದು ಬರೆಯಲಾಗಿದೆ.

### ಪತ್ರ -೩೫

ಓಂ ರಾಮಕೃಷ್ಣ ಜಯತಿ

ಶರಣಂ ೬.೪.೧೯೦೮

ಪರಮ ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ವಿಶೇಷವೇನೆಂದರೆ,

ಪ್ರೀತಿಯ ಮಗೂ, ನಿನ್ನ ಪತ್ರ ಸಿಕ್ಕಿ ನಾನು ತುಂಬಾ ಆನಂದಿತಳಾದೆ. ಹಾಗೂ, ಮಠಕ್ಕೆ ತೆರಿಗೆ ವಿನಾಯತಿ ಆಗಿದೆ ಎಂದು ಬರೆದಿರುವೆ. ಕಂದಾಯ ಪತ್ರಗಳು ಬೇಕಾಗಿಲ್ಲ— ಅದು ಶ್ರೀಶ್ರೀ ಠಾಕೂರರ ಕೃಪೆಯಿಂದ ಮಾತ್ರವೇ ಆಗಿರುವುದು. ಏನಾದರಾಗಲಿ ನಾನು ಇದನ್ನು ಕೇಳಿ ಸಂತುಷ್ಟಳಾದೆ. ರುದ್ರಚೈತನ್ಯನಿಗೆ ಹಾಗೂ ವೈರಾಗ್ಯಾನಂದನಿಗೆ ನನ್ನ ಆಶೀರ್ವಾದ ತಿಳಿಸು. ನಿನಗೂ ನನ್ನ ಆಶೀರ್ವಾದ ಮತ್ತು ಬೇರೆ ಬೇರೆ ಭಕ್ತರಿಗೂ ಅದನ್ನು ತಿಳಿಸು. ನಾನು ಸದ್ಯ ಚೆನ್ನಾಗಿದ್ದೇನೆ. ಮನೆಯವರೆಲ್ಲರೂ ಒಂದು ರೀತಿ ಚೆನ್ನಾಗಿದ್ದಾರೆ.

ಇತಿ ವರ್ಷ ೧೩೧೪, ತಾ– ೨೪ ಚೈತ್ರ
ಸೋಮವಾರ
ನಿನ್ನ ಮಾತಾದೇವಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*The Swami Ramakrishnanandaji*
*Sri Ramakrishna Home*
*Brodies' Road*
*Mylapore, Madras*

### ಪತ್ರ – ೩೬

ಶ್ರೀ ಶ್ರೀ ದುರ್ಗಾಮಾತೆಯ ಕೃಪೆ

ತಾ– ೨೨ ವೈಶಾಖ ೭.೫.೧೯೦೮

ಸುರಕ್ಷಿತವಾಗಿರು —

ಪ್ರೀತಿಯ ಮಗೂ, ನಿನ್ನ ಪತ್ರವು ಸಿಕ್ಕಿ ಎಲ್ಲವನ್ನೂ ತಿಳಿದುಕೊಂಡೆ. ಇಲ್ಲಿಯೂ ಅತ್ಯಂತ ಸೆಖೆ ಶುರುವಾಗಿದೆ. ಮಳೆ ದೇವತೆ ಬಂದಿಲ್ಲ. ನಾನು ಚೆನ್ನಾಗಿದ್ದೇನೆ. ಮನೆಯವರೆಲ್ಲರೂ ಚೆನ್ನಾಗಿದ್ದಾರೆ. ನಿಮ್ಮೆಲ್ಲರ ಯೋಗಕ್ಷೇಮದ ಬಗ್ಗೆ ಯಾವಾಗಲೂ ಬರೆಯುತ್ತಿರು. ಮತ್ತು ನನ್ನ ಆಶೀರ್ವಾದ ತೆಗೆದುಕೋ.

ಇತಿ, ಜಯರಾಂಬಾಟಿ
ಪೋಸ್ಟ್ : ಆನೂರ್, ಹೂಗ್ಲಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*ಶ್ರೀಮಾನ್ ಯತೀಶ್ ಚಂದ್ರ ಸೇನ್‌ಗುಪ್ತ*
*ಜಾತೀಯ ಭಂಡಾರ, ಬರಿಸಾಲ್*
*Barisal*

### ಪತ್ರ ೩೭

ಶ್ರೀ ಶ್ರೀ ದುರ್ಗೆಯ ಕೃಪೆ

೨೮. ೮.೧೯೦೮

ಚಿರಂಜೀವಿಗೆ,

ಪ್ರೀತಿಯ ಮಗು, ಈಗತಾನೇ ನಿನ್ನ ಪಾರ್ಸೆಲ್—೨ ಜೋಡಿ ಸೀರೆ ಮತ್ತು ೮ ಪೋಸ್ಟ್ ಕಾರ್ಡುಗಳು ಸಿಕ್ಕಿದವು. ಸೀರೆಯನ್ನು ನಾಳೆಯೇ ಉಡುತ್ತೇನೆ. ಕೋಲ್ಕತ್ತೆಗೆ ಹೋಗು. ಈಗ ಹೊಸಮನೆ. ಮನೆ ಸ್ವಲ್ಪ ಒಣಗಿದ ಮೇಲೆ, ಎಂದರೆ ಜಗದ್ಧಾತ್ರಿಯ ಪೂಜೆಯ ನಂತರ ಏನಾಗುವುದೋ ಬರೆದು ತಿಳಿಸು. ಉಳಿದಂತೆ ಇಲ್ಲಿ ಎಲ್ಲರೂ ಕ್ಷೇಮ. ನಿಮ್ಮೆಲ್ಲರ ಯೋಗಕ್ಷೇಮವನ್ನು ಬರೆದು ತಿಳಿಸು.

ಇತಿ, ೧೧ ಭಾದ್ರಪದ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*ಪರಮ ಪ್ರೀತಿಯ*
*ಶ್ರೀಮಾನ್ ನಿರ್ಮಲಚಂದ್ರ ದಾಸ್ ಘೋಷ್*
*ಕಲ್ಕತ್ತಾ ಗ್ರೇ ಸ್ಟ್ರೀಟ್, ನಂ.೧೦೭,*
*ಶ್ರೀಕುಮಾರ ಕುಮಾರ ಕೃಷ್ಣ ಬಹಾದುರನ ಮನೆ*
*Calcutta*

### ಪತ್ರ – ೩೮

ಶ್ರೀ ಶ್ರೀ ದುರ್ಗಾ

೨೮. ೯.೧೯೦೮
ಜಯರಾಂಬಾಟಿ, ೧೩೧೫ನೇ ವರ್ಷ

ಪರಮ ಶುಭಾಶೀರ್ವಾದ, ವಿಶೇಷವೇನೆಂದರೆ —

ಪ್ರೀತಿಯ ಮಗೂ, ನಿನ್ನ ೮ ಪೋಸ್ಟ್ ಕಾರ್ಡ್‌ಗಳು, ಮತ್ತು ಸೀರೆಗಳು ಸಿಕ್ಕಿದವು. ಸೀರೆಗಳು ಚೆನ್ನಾಗಿವೆ. ದಿನನಿತ್ಯ ಉಡಲು ಸಾಧ್ಯವಾಗುವುದು. ಚಳಿಗಾಲಕ್ಕಂತೂ ಚೆನ್ನಾಗಿರುತ್ತದೆ. ನಾನು ಚೆನ್ನಾಗಿದ್ದೇನೆ, ಮತ್ತು ಮನೆಯವರೆಲ್ಲರೂ ಚೆನ್ನಾಗಿಯೇ ಇದ್ದಾರೆ. ನಿಮ್ಮೆಲ್ಲರ ಶಾರೀರಿಕ ಸುಸ್ಥಿತಿಯ ಬಗ್ಗೆ ಮಧ್ಯೆ ಮಧ್ಯೆ ಬರೆದು ಸಮಾಧಾನ ನೀಡು. ಉಳಿದಂತೆಲ್ಲ ಮಂಗಳ.

ಇತಿ– ೧೨ , ಅಶ್ವಿನ್
ನಿಮ್ಮೆಲ್ಲರ ತಾಯಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*ಪರಮ ಪ್ರೀತಿಯ*
*ಶ್ರೀಮಾನ್ ನಿರ್ಮಲಚಂದ್ರ ದಾಸ್ ಘೋಷ್*
*ಕಲ್ಕತ್ತಾ ಗ್ರೇ ಸ್ಟ್ರೀಟ್, ನಂ.೧೦೭,*
*ಶ್ರೀಕುಮಾರ ಕುಮಾರ ಕೃಷ್ಣ ಬಹಾದುರನ ಮನೆ*
*Calcutta*

ಶ್ರೀ ಮಾತೆಯವರು ಎಷ್ಟೊಂದು ಸರಳವಾಗಿದ್ದರೆಂದರೆ ತಮ್ಮ ಮನಸ್ಸಿನಲ್ಲಿರುವುದನ್ನು ಸರಳವಾಗಿ ಹೇಳುತ್ತಿದ್ದರು. ಈ ಪತ್ರದಲ್ಲಿ ಭಕ್ತನು ಕಳುಹಿಸಿರುವ ಸೀರೆಯ ಬಗ್ಗೆ ತಿಳಿಸಿದ್ದಾರೆ – ಸೀರೆಯನ್ನು ದಿನನಿತ್ಯ ಉಪಯೋಗಿಸಬಹುದು ಎಂದು. ಏಕೆಂದರೆ ಅದು ಸಾಧಾರಣ ಸೀರೆಯಾಗಿದ್ದಿರಬಹುದು. ಬೆಲೆಬಾಳುವ ಸೀರೆಯಾಗಿದ್ದರೆ ಅದನ್ನು ಎತ್ತಿಡಬೇಕು. ಹಾಗೂ ಅದು ದಪ್ಪವಾಗಿದ್ದಿರಬೇಕು, ಆದ್ದರಿಂದಲೇ ಅದು ಚಳಿಗಾಲಕ್ಕೆ ಸರಿ ಎಂದು ತಿಳಿಸಿದ್ದಾರೆ.